ಅಧುನೀಕರಣ ಯೋಜನೆ

419(670); ಶ್ರೀ ಶಾಂತನಗೌಡ ಡಿ.ಜಿ. [ಹೊನ್ನಾಳಿ]

ಅ) ಭದ್ರಾ ಆಧುನೀಕರಣ ಯೋಜನೆಯಡಿ ಆನವೇರಿ ಶಾಖಾ ನಾಲೆಯ (67 ಕಿ.ಮೀ. ಉದ್ದ) ವ್ಯಾಪ್ತಿಯ ವಿತರಣಾ ನಾಲೆಗಳು ಮತ್ತು ಲ್ಯಾಟರಲ್‌ಗಳಲ್ಲಿನ ಕಟ್ಟಡಗಳ ಪುನರುಜ್ಜೀವನ ಮತ್ತು ಲೈನಿಂಗ್ ಒಳಗೊಂಡ (ಪ್ಯಾಕೇಜಸ್ 6 ಎ) ಕಾಮಗಾರಿಯ ಟೆಂಡರ್ ಆಗಿ ಐದು ವರ್ಷಗಳು ಕಳೆದರೂ ಕಾಮಗಾರಿ ಆರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ವ್ಯಾಪ್ತಿಯಲ್ಲಿ ಬರುವ ಆನವೇರಿ, ಸಾಸ್ವೆಹಳ್ಳಿ, ಬೆನಕನಹಳ್ಳಿ, ಬೇಲಿಮಲ್ಲೂರು ಭಾಗದ 50-60 ಗ್ರಾಮಗಳ ರೈತ ಜಮೀನುಗಳಿಗೆ ನೀರು ಸರಾಗವಾಗಿ ಹರಿಸಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ವಿಳಂಬವಾದ ಈ ಟೆಂಡರ್ ರದ್ದುಪಡಿಸದೇ ಇರಲು ಕಾರಣಗಳೇನು; ಇದರಿಂದ ಹೊಸದಾಗಿ ಟೆಂಡರ್ ಕರೆಯಲು ತೊಂದರೆಯಾಗಿದ್ದರೂ ಸರ್ಕಾರ ರೈತರ ವಿಷಯದಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದರಿಂದ ಈ ಭಾಗದ ರೈತರು ಸರ್ಕಾರದ ವಿರುದ್ಧ ಹೋರಾಟ ನಡೆಸಲು ಸಿದ್ದವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿ ತೀವ್ರ ವಿಳಂಬದಿಂದ ಕಾಮಗಾರಿ ಅಂದಾಜು ವೆಚ್ಚ ದುಪ್ಪಟ್ಟು ಹೆಚ್ಚಾಗುವುದರಿಂದ ಸರ್ಕಾರ ಈ ನಷ್ಟವನ್ನು ಮೊದಲು ಟೆಂಡರ್ ಪಡೆದಿದ್ದ ಗುತ್ತಿಗೆದಾರರಿಂದ ವಸೂಲಿ ಮಾಡಿ, ಅವರನ್ನು ಕಪ್ಪು ಪಟ್ಟಿಗೆ ಸೇರಿಸಲು ಮುಂದಾಗುವುದೇ?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಭದ್ರಾ ಆಧುನೀಕರಣ ಯೋಜನೆಯಡಿ ಆನವೇರಿ ಶಾಖಾ ಕಾಲುವೆ/ ವಿತರಣಾ ಕಾಲುವೆ ಲ್ಯಾಟರಲ್ ಸಹಿತ ಲೈನಿಂಗ್ ಮತ್ತು ಕಟ್ಟಡಗಳ ಪುನರುಜ್ಜೀವನ ಕಾಮಗಾರಿಗಳನ್ನು ಮೆ॥ ಜಿ.ವಿ.ಪಿ.ಆರ್ ಇಂಜಿನಿಯರ್ಸ್ ಲಿ., ಇವರಿಗೆ ಗುತ್ತಿಗೆ ಕರಾರು ಸಂಖ್ಯೆ: 02/2007–08 ದಿನಾಂಕ: 25–06–2007 ರಲ್ಲಿ ವಹಿಸಲಾಗಿದ್ದು, ಗುತ್ತಿಗೆದಾರರು 2011 ರವರೆಗೆ ಶೇ. 80 ರಷ್ಟು (₹ 71.92 ಕೋಟಿ) ಆರ್ಥಿಕ ಪ್ರಗತಿ ಸಾಧಿಸಿದ್ದು ನಂತರ ಕಾಮಗಾರಿಗಳನ್ನು ಸ್ಥಗಿತಗೊಳಿಸಿದ್ದಾರೆ. ಸದರಿ ಟೆಂಡರ್ ರದ್ದತಿ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ.

ಆ) ಇದುವರೆಗೂ ನಿರ್ವಹಿಸಿದ ಕಾಮಗಾರಿಗಳಿಂದ ರೈತರ ಜಮೀನುಗಳಿಗೆ ಸರಾಗವಾಗಿ ನೀರು ಹರಿಯುತ್ತಿದ್ದು, ಬಾಕಿ ಕಾಮಗಾರಿ ಪೂರ್ಣಗೊಳಿಸದ ಕಾರಣ ನೀರು ನಿರ್ವಹಣೆ ಸಮಸ್ಯೆಯಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಇ) ಗುತ್ತಿಗೆದಾರರಿಗೆ ಹಲವು ಬಾರಿ ಉಳಿಕೆ ಕಾಮಗಾರಿ ಪೂರ್ಣಗೊಳಿಸಲು ತಿಳಿಸಿದ್ದರೂ ಕಾಮಗಾರಿ ಪೂರ್ಣಗೊಳಿಸಲು ಮುಂದೆ ಬಂದ ಕಾರಣ ಈ ಟೆಂಡರನ್ನು ರದ್ದು ಪಡಿಸಲು, ಪ್ರಸ್ತಾವನೆ ಇದ್ದು ಪರಿಶೀಲಿಸಲಾಗುತ್ತಿದೆ. ಟೆಂಡರ್ ರದ್ದತಿ ಪ್ರಸ್ತಾವನೆ ಅನುಮೋದನೆಗೊಂಡ ನಂತರ ಹೊಸದಾಗಿ ಟೆಂಡರ್ ಕರೆದು ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುವುದು.

ಈ) ಗುತ್ತಿಗೆ ಕರಾರನ್ನು ಗುತ್ತಿಗೆದಾರರ ಹೊಣೆ ಮತ್ತು ಬದ್ಧತೆ ಮೇಲೆ ರದ್ದು ಪಡಿಸುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ. ಪರಿಶೀಲನೆಯ ನಂತರ ಟೆಂಡರ್ ಕರಾರಿನನ್ವಯ ಹಾಗೂ ಇಲಾಖಾ ನಿಯಮಾನುಸಾರ ಗುತ್ತಿಗೆದಾರರ ಮೇಲೆ ಕ್ರಮ ಜರುಗಿಸಲಾಗುವುದು.